# ಇದು ಮಸೂದೆಗಳ ಸಮಯ

ಈ ವರ್ಷ ಸಂಸತ್ ಕಲಾಪಗಳು ಹೆಚ್ಚು ಸದ್ದು ಮಾಡಿದವು. ಅದಕ್ಕೆ ಕಾರಣ ಲೋಕಸಭೆಯಲ್ಲಿ ನಿಚ್ಚಳ ಬಹುಮತದಿಂದ ಬೀಗುತ್ತಿರುವ ಬಿಜೆಪಿ ಸರ್ಕಾರ ಪುಂಖಾನುಪುಂಖವಾಗಿ ಮಂಡಿಸಿದ ಮಸೂದೆಗಳು. ಜೂನ್‌ನಿಂದ ಈಚೆಗೆ, ಕಳೆದ 6 ತಿಂಗಳ ಅವಧಿಯಲ್ಲಿ ಒಟ್ಟು 58 ಮಸೂದೆಗಳು ಸಂಸತ್ತಿನಲ್ಲಿ ಮಂಡನೆಯಾದವು ಈ ಪೈಕಿ ಹೆಚ್ಚು ಗಮನ ಸೆಳೆದ ಕೆಲ ಮಸೂದೆಗಳ ಪರಿಚಯ ಇಲ್ಲಿದೆ.

### ಮುಸ್ಲಿಂ ಮಹಿಳೆಯರ (ವಿವಾಹ ಹಕ್ಕುಗಳ ರಕ್ಷಣೆ) ಮಸೂದೆ (ಜೂನ್ 21)

‘ತ್ರಿವಳಿ ತಲಾಖ್ ನಿಷೇಧಿಸುವ ಈ ಮಸೂದೆ ವಿಶ್ವದ ಗಮನ ಸೆಳೆದಿತ್ತು. ಧಾರ್ಮಿಕ ಸ್ವಾತಂತ್ರ್ಯದಲ್ಲಿ ಸರ್ಕಾರಗಳು ಹಸ್ತಕ್ಷೇಪ ಮಾಡಬಹುದೇ? ಧರ್ಮದ ಹೆಸರಿನಲ್ಲಿ ಮಹಿಳೆಯರ ಹಕ್ಕುಗಳ ದಮನವಾಗುತ್ತಿದ್ದರೂ ಸರ್ಕಾರ ಸುಮ್ಮನಿರಬೇಕೆ? ಎನ್ನುವ ಪ್ರಶ್ನೆಗಳು ವ್ಯಾಪಕವಾಗಿ ಚರ್ಚೆಯಾದವು. ತ್ರಿವಳಿ ತಲಾಖ್ ನೀಡಿದ ಪುರುಷರ ವಿರುದ್ಧ ಹಲವು ಮಹಿಳೆಯರು ಈ ಕಾಯ್ದೆ ಬಳಸಿ ಪ್ರಕರಣಗಳನ್ನು ದಾಖಲಿಸಿದ್ದಾರೆ.

### ಮೋಟಾರು ವಾಹನ (ತಿದ್ದುಪಡಿ) ಮಸೂದೆ (ಜುಲೈ 15)

ಸಂಚಾರ ನಿಯಮ ಉಲ್ಲಂಘನೆಗಳಿಗೆ ವಿಧಿಸುವ ದಂಡದ ಮೊತ್ತವನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸುವ ಮೂಲಕ ರಸ್ತೆಯಲ್ಲಿ ಶಿಸ್ತು ತರಲು ಉದ್ದೇಶಿಸಿದ್ದ ಮಸೂದೆ ಇದು. ಆರಂಭದ ಕೆಲ ದಿನಗಳಲ್ಲಿ ಸಂಚಾರ ಪೊಲೀಸರು ವಿಧಿಸುತ್ತಿದ್ದ ದಂಡದ ಮೊತ್ತ ದೊಡ್ಡ ಸುದ್ದಿಯಾಗುತ್ತಿತ್ತು. ಆದರೆ ನಂತರದ ದಿನಗಳಲ್ಲಿ ಹಲವು ರಾಜ್ಯ ಸರ್ಕಾರಗಳು ಜನರ ಒತ್ತಾಯಕ್ಕೆ ಮಣಿದು ದಂಡದ ಮೊತ್ತವನ್ನು ಕಡಿಮೆ ಮಾಡಿದವು.

### ಆಧಾರ್, ಇತರ ಕಾನೂನುಗಳ (ತಿದ್ದುಪಡಿ) ಮಸೂದೆ (ಜೂನ್ 24)

ಬ್ಯಾಂಕ್ ಖಾತೆ ತೆರೆಯುವಾಗ ಮತ್ತು ಮೊಬೈಲ್ ಸಂಪರ್ಕ ಪಡೆಯುವಾಗ ಸ್ವಯಂ ಪ್ರೇರಣೆಯಿಂದ ಆಧಾರ್ ಮಾಹಿತಿ ಕೊಡಬಹುದು ಎಂದು ಮಸೂದೆ ಹೇಳುತ್ತದೆ. ಪರೋಕ್ಷವಾಗಿ ಆಧಾರ್ ಹೇರಲು ಸರ್ಕಾರ ಪ್ರಯತ್ನಿಸುತ್ತಿದೆ ಎಂಬ ಟೀಕೆಯನ್ನು ಈ ಮಸೂದೆ ಎದುರಿಸಿತ್ತು.

### ತೃತೀಯ ಲಿಂಗಿಗಳ (ಹಕ್ಕುಗಳ ರಕ್ಷಣೆ) ಮಸೂದೆ (ಜುಲೈ 19)

ಲಿಂಗ ಪರಿವರ್ತನೆ ಮಾಡಿಸಿಕೊಂಡವರಿಗೆ ಯಾವುದೇ ವಿಧದ ತಾರತಮ್ಯ ಮಾಡುವುದನ್ನು ಈ ಮಸೂದೆ ನಿಷೇಧಿಸುತ್ತದೆ. ದೇಶದ ಇತರೆಲ್ಲಾ ಪ್ರಜೆಗಳಂತೆ ತೃತೀಯ ಲಿಂಗಿಗಳು ಅಥವಾ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳನ್ನು ಖಾತ್ರಿಪಡಿಸುವುದು ಈ ಮಸೂದೆಯ ಉದ್ದೇಶ.



6

## ‘ಐಸಿಸ್’ ಮುಖ್ಯಸ್ಥನ ಹತ್ಯೆ—ಅಟ್ಟಹಾಸ

ವಿವಿಧ ದೇಶಗಳಲ್ಲಿ ನಡೆದ ಭಯೋತ್ಪಾದನಾ ದಾಳಿಗಳ ಜೊತೆಗೆ, ವಿಶ್ವಶಾಂತಿಗೆ ಕಂಟಕವೆನಿಸಿರುವ ಉಗ್ರರ ಸಂಸ್ಥೆ ಇಸ್ಲಾಮಿಕ ಸ್ಟೇಟ್ (‘ಐಸಿಸ್’) ಮುಖ್ಯಸ್ಥ ಅಬುಬಕರ್ ಅಲ್ ಬಾಗ್ದಾದಿಯ ಹತ್ಯೆಗೆ 2019 ಸಾಕ್ಷಿಯಾಯಿತು. ಅ. 27ರಂದು ಅಮೆರಿಕ ಸೇನೆ ಸಿರಿಯಾದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಬಾಗ್ದಾದಿ ಸಾವಿಗೀಡಾಗಿದ್ದಾನೆ. ಒಸಾಮ ಬಿನ್ ಲಾಡೆನ್ ನಂತರ ಭಯೋತ್ಪಾದನೆ ವಿರುದ್ಧದ ಹೋರಾಟದ ಮೈಲುಗಳಲ್ಲಿ ಈ ಹತ್ಯೆ ಪ್ರಮುಖವಾಗಿದೆ. ಈ ಸಾಧನೆಯ ಜೊತೆಗೆ – ವಿಶ್ವದ ಶಾಂತಿಯ ನೆಲೆಗಳಲ್ಲಿ ಒಂದಾದ ನ್ಯೂಜಿಲೆಂಡ್‌ನಲ್ಲಿ ಚರ್ಚೊಂದರ ಮೇಲೆ ನಡೆದ ಉಗ್ರರ ದಾಳಿಯಲ್ಲಿ (ಮಾರ್ಚ್ 15) 51 ಮಂದಿ ಸಾವಿಗೀಡಾದ ಹಾಗೂ ಅಮೆರಿಕಾದ ಟೆಕ್ಸಾಸ್‌ನ ವಾಲ್‌ಮಾರ್ಟ್‌ನಲ್ಲಿ ನಡೆದ ಗುಂಡುದಾಳಿಯಲ್ಲಿ (ಆಗಸ್ಟ್ 3) 22 ಜನ ಕೊನೆಯುಸಿರೆಳೆದ ದುರಂತಗಳು 2019ರ ಕಹಿ ನೆನಪುಗಳಾಗಿವೆ.


